ರತ್ನಾ ಅಶೋಕ ಗೊರವರ, ಧಾರವಾಡ

*ಆಪತ್ತಿಗಾದವನೇ ನೆಂಟ; ಆಗದಿದ್ದವ?*



ನ್ಯೂಸ್ ರಿಪೋರ್ಟರ್ ಮತ್ತು ಅವನ ಕ್ಯಾಮೆರಾ ಬಂಟ.

ಹೆಚ್.ವೈ. ಸೀತಾರಾಮಯ್ಯ, ಹಾಲ್ಮತ್ತೂರು

*ಟಿವಿ ಬಾಯಿ ಬಂದ್ ಮಾಡಲಿಕ್ಕೆ ರಿಮೋಟ್ ಕಂಟ್ರೋಲ್; ಹೆಂಡತಿಯ ಬಾಯಿ ಬಂದ್ ಮಾಡಲಿಕ್ಕೆ?*

ಹೆಂಡತಿಯನ್ನು ಮೇಕಪ್, ಆಭರಣ ಮತ್ತು ವಸ್ತ್ರಗಳ ವಾಟ್ಸ್ಯಾಪ್ ಗುಂಪುಗಳ ಅಡ್ಮಿನ್ ಮಾಡಿಬಿಡಿ!

ಕೆ.ಎಂ. ವಿಭೂತಿ, ಹರಿಹರ

*ಮಂಗನಿಂದ ಮಾನವನಾದರೂ ಇಲ್ಲೊಬ್ಬನಿಗೆ ಮಂಗನ ಮತಿ ಹೋಗದಿರಲು ಕಾರಣವೇನು?*

ಮನುಷ್ಯನಾಗಿದ್ದನಂತೆ; ಆದರೆ ನರನಾಗಿ ವಿವಾಹಕ್ಕೆ ಸಿಲುಕುವುದಕ್ಕಿಂತ ವಾನರನಾಗಿ ಲಿವಿಂಗ್ ಟುಗೆದರ್ ವಾಸಿಯೆನಿಸಿ ಅತ್ತ ಹಾರಿದನಂತೆ.

ಕುಮಾರ ಚಲವಾದಿ, ಹೊಳೆನರಸೀಪುರ

*ಸದಾ ಕಿಕ್ ಕೊಡುವ ವಸ್ತು ಯಾವುದು?*



ಕೆಟ್ಟ ಬೈಕ್‌ಗಳನ್ನು ಸ್ಟಾರ್ಟ್ ಮಾಡಲು ಯತ್ನಿಸುವ ಮೆಕ್ಯಾನಿಕ್‌ನ ಕಾಲು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಅತ್ತೆಗೂ, ಕತ್ತೆಗೂ ಏನು ವ್ಯತ್ಯಾಸ?*

ಅತ್ತೆಗೆ ಕತ್ತೆಯಂತಹ ಮಗ ಇರುತ್ತಾನೆ. ಕತ್ತೆಗೆ ಅತ್ತೆಯಂತಹ ಮರಿ ಇರುವುದಿಲ್ಲ!

ಎಂ.ಎ. ಕುಮಾರ್, ಬೆಂಗಳೂರು

*ಕರ್ನಾಟಕ ಬಂದ್ ಆದರೂ ದೇವಸ್ಥಾನ ಬಂದ್ ಆಗುವುದಿಲ್ಲ. ಯಾಕೆ?*

ಬಂದ್ ಮಾಡುವ ಹೊಲಸು ಬುದ್ಧಿಯನ್ನು ಹೋಗಲಾಡಿಸಪ್ಪ ಎಂದು ಕೇಳಿಕೊಳ್ಳುವವರಿಗಾಗಿ.

ಬಸವಣ್ಣ ಹೊನಖಾಂಡೆ, ಬಸವನಬಾಗೇವಾಡಿ

*ಸನ್ಯಾಸಿ, ಬ್ರಹ್ಮಚಾರಿಗಳೆಲ್ಲ ರಾಜಕೀಯ ಸೇರುತ್ತಿದ್ದಾರಲ್ಲ, ಇದು ಉತ್ತಮ ಬೆಳವಣಿಗೆಯೆ?*

ಸಾಧ್ವಿಯರ ಬೆನ್ನು ಬೀಳದೆ, ಸಾಧನೆಯ ಬಾಲ ಹಿಡಿದರೆ ಮಾತ್ರ.

ಟಿ.ಆರ್. ರವೀಂದ್ರ, ಬೆಂಗಳೂರು

*ಪ್ರೀತಿಯು ದೈಹಿಕ ಆಕರ್ಷಣೆಯೋ ಅಥವಾ ಮನಸ್ಸಿನ ಆಕರ್ಷಣೆಯೋ?*

ಪ್ರೀತಿ ಕೈಕೊಟ್ಟಾಗ ಹೆಚ್ಚಾಗಿ ಮೆಂಟಲ್ಲೇ ಆಗುವುದರಿಂದ, ಮಾನಸಿಕವೇ.

ಮೋಹನ ರು. ಹಣಗಿ, ಅಮೀನಗಡ

*ಪ್ರಶ್ನೆಗಳನ್ನು ಕೇಳುವುದೂ ಒಂದು ಕಲೆಯೇ ರಾಮ್‌ಜೀ?*

ಅದೇ ಸಾರ್ಥಕ ಬದುಕಿನ ಕಲೆ – ಕೇಳಿದವನು ಬಾಳಿಯಾನು!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಅಲಂಕಾರಕ್ಕೂ, ಅಹಂಕಾರಕ್ಕೂ ಇರುವ ವ್ಯತ್ಯಾಸವೇನು ಶಿವಾ?*

ಅಲಂಕಾರದಿಂದ ಶೋಭೆ; ಅಹಂಕಾರದಿಂದ ಕ್ಷೋಭೆ.

ಕೃಷ್ಣಮೂರ್ತಿ ಎಸ್., ಬೆಂಗಳೂರು

*ಕನ್ನಡಕ್ಕಾಗಿ ಕೈ ಎತ್ತುವವರಿಗಿಂತ ಕಾಲೆಳೆಯುವವರೇ ಹೆಚ್ಚಾಗಿದ್ದಾರಲ್ಲ, ಏನು ಮಾಡಲಿ?*

ಭೀಮನಿಗೆ ಬಾಲ ಅಡ್ಡವಿಟ್ಟ ಹನುಮನಾಗಿ; ಕಾಲೆಳೆಯುವ ಕೈಯೇ ಕಾಲಿಗೆ ಬೀಳುತ್ತದೆ.

ಅಂದಾನಯ್ಯ ತಿಗರಿಮಠ, ಅಳವಂಡ

*ಹೆಂಗಸರು ಕನಸೆಂಬ ಕುದುರಿ ಹಿಂದ ಸತತ ಓಡುತ್ತಿದ್ದಾರೆಯೆ?*

ಊಹೂಂ. ಅವರೇ ಹಲವಾರು ಗಂಡಸರಿಗೆ ಕನಸಾಗಿ ಸಾಗುತ್ತಿದ್ದಾರೆ ಅಷ್ಟೆ.

ಅನಾಮಿಕ, ಮೈಸೂರು

*ದಿನವೂ ಮನೆಯ ಕಾಂಪೌಂಡ್, ಮುಂದಿರುವ ರಸ್ತೆಯನ್ನು ನೀರು ಸುರಿದು ತೊಳೆಯುವುದು ಸ್ವಚ್ಛತಾಭಾವವೋ, ನೀರಿನ ಪೋಲೋ?*

ಗುಟ್ಕಾ ಪ್ರಿಯರಿರುವ ಬೀದಿಯಾದರೆ – ಸ್ವಚ್ಛತಾಭಾವ.

## ಬಹುಮಾನಿತ ಪ್ರಶ್ನೆ

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಕೆಲವರಿಗೆ ಎ.ಸಿ.ಯಲ್ಲಿದ್ದರೂ ಬಿಸಿ ತಟ್ಟುತ್ತಲೇ ಇರಲು ಕಾರಣ?*

ದುರ್ಯೋಧನನ ವಂಶಜರು; ಏಸಿಯೊಳಿರ್ದುಂ ರೈಡೆನಲ್ ಬೆಮರ್ವರ್ ಸುಲಿಗೆ ಪಥಿಕರ್.

ಅನಂತಪದ್ಮನಾಭ ಹೆಚ್.ಎಂ., ಮೈಸೂರು

*ಹುಡುಗಿ ಹಣ ಬೀಳಿಸಿದರೆ ಎತ್ತಿ ಕೊಡಬೇಕಾ ಅಥವಾ ಮೆತ್ತಗೆ ಜೇಬಿಗಿಳಿಸಬೇಕಾ?*

ಎತ್ತಿಕೊಟ್ಟರೆ ಹುಡುಗಿಯೇ ಬುಟ್ಟಿಗೆ ಬಿದ್ದಾಳು; ಆಯ್ಕೆ ನಿಮ್ಮದು.

ಜೆ.ಜೆ. ದೊಡ್ಡಮನಿ, ವಿಜಯಪುರ

*ಲಿಂಗಾಯತ ಪ್ರತ್ಯೇಕ ಧರ್ಮದ ಬೇಡಿಕೆಯ ಹಿಂದೆ ಅಲ್ಪಸಂಖ್ಯಾತರಾಗಿ ಸವಲತ್ತುಗಳನ್ನು ಪಡೆಯುವ ಹುನ್ನಾರವಿದೆಯೆ?*

ಇದ್ದರೆ ಅಚ್ಚರಿಯೇನಿಲ್ಲ; ಲಾಭವಿಲ್ಲದೆ ಲಾಬಿ ಇಲ್ಲ!

ವೀಣಾ ಶರ್ಮ, ಬೋಸ್ಲಾನಹಳ್ಳಿ

*ಮಹಿಳೆಯರ ಕ್ರಿಕೆಟಿನಲ್ಲಿ ಪುರುಷರೇ ಅಂಪೈರ್ ಆಗಲು ಕಾರಣ?*



ಪ್ರತಿ ಚಲನೆಯನ್ನೂ ಬಹಳ ಆಸಕ್ತಿಯಿಂದ ನೋಡಿಯೇ ನೋಡುವರೆಂಬ ಗ್ಯಾರಂಟಿ!

ನಳಿನಿ ಆರ್. ಮಾಗಲ್, ಸಕಲೇಶಪುರ

*ನಾಳೆ ಅನ್ನೋದೇ ಖಾತ್ರಿ ಇರಲ್ಲ; ಆದ್ರೆ ಇಂದೇ ದೋಸೆಹಿಟ್ಟು ರುಬ್ಬಿಡ್ತಾರಲ್ಲಾ...?*

ಹಾಗೆಂದು ಯಾರೂ ಜಗಲಿಯಲ್ಲಿ ಚಟ್ಟದಲ್ಲಿ ಮಲಗುವುದಿಲ್ಲವಲ್ಲ! ಎದ್ದರೆ ದೋಸೆಯೊಡನೆ ಚಾಪಲ್ಯ ಎಂಬ ಚಾಪಲ್ಯವೇ ಜೀವನ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಯಾರಿಂದಲೂ ಕದಿಯಲಾಗದ ವಸ್ತು ಯಾವುದು?*

ಪರಿಶುದ್ಧವಾದ ಮೊದ್ದುತನ.

■ ರಾಮ್